ವಿಷಯ: ಶ್ರೀ. ಕಲ್ಲೇಶಪ್ಪ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ ಕುರಿತು.

ಗ್ರಾಅಪ/230/ಗ್ರಾಪಂಕಾ/2017

**ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಅಸಪ ಸಂಖ್ಯೆ : D.O.No. LOK/INQ/14A/121/2013/ARE-1. ದಿನಾಂಕ: 10.03.2017.**

1) ದಯವಿಟ್ಟು ಪುಟ-18 ರಲ್ಲಿರುವ ರಿಜಿಸ್ಟ್ರಾರ್ ಕರ್ನಾಟಕ ಲೋಕಾಯುಕ್ತ ಇವರ ಪತ್ರವನ್ನು ಅವಗಾಹಿಸುವುದು. ಶ್ರೀ. ಕಲ್ಲೇಶಪ್ಪ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ, ಇವರು ನಡೆಸಿರುವ ಇಲಾಖಾ ವಿಚಾರಣಾ ವರದಿ ಹಾಗೂ ಸದರಿ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು (ಕ್ರಮವಾಗಿ ಪುಟ-12 ಮತ್ತು 16) ಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

2) ಶ್ರೀ. ಕಲ್ಲೇಶಪ್ಪ, ಇವರು ಸದರಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಡೆಸಿದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:746:ಗ್ರಾಪಂಕಾ:2012, ದಿನಾಂಕ: 16.02.2013 ರಲ್ಲಿ ವಹಿಸಲಾಗಿತ್ತು.

3) ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಶ್ರೀ. ಕಲ್ಲೇಶಪ್ಪ, ಇವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

> " That you DGO Sri. H.N. Kalleshappa, Grama Panchayathi Secretary, Alagawadi Grama Panchayathi, Chitradurga demanded and accepted a bribe of Rs. 5,000/- on 25/04/2011 from complainant Smt. Giddi Mehabooba W/o Hussain Peer of Venkateshwara Extension, Challakere Road, Chitradurga for giving licenses towards construction of a house, that is for doing an official act, and thereby you failed to maintain absolute integrity and devotion to duty and committed an act which is unbecoming of a Government servant and thus you are guilty of misconduct under Rule 3(1)(i) to (iii) of KCS (Conduct) Rules 1966".

4) ವಿಚಾರಣಾಧಿಕಾರಿಯವರು, ದಿನಾಂಕ: 03.03.2017 ರಂದು ಮಾನ್ಯ ಉಪಲೋಕಾಯುಕ್ತರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿದ್ದು (ಪುಟ-12) ಸದರಿ ವರದಿಯ ಅನುಸಾರ ಶ್ರೀ. ಕಲ್ಲೇಶಪ್ಪ, ರವರ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ.

5) ಈ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) (2) (ಡಿ) ಅನುಸಾರ ದಿನಾಂಕ: 09.03.2017 ರಂದು ಮಾಡಿರುವ ಶಿಫಾರಸ್ಸಿನಲ್ಲಿ (ಪುಟ-16) ಶ್ರೀ. ಕಲ್ಲೇಶಪ್ಪ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(viii) ರ ಅನುಸಾರ ಅವರಿಗೆ **"ಸೇವೆಯಿಂದ ವಜಾಗೊಳಿಸುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಿಷಯ: ಶ್ರೀ. ಕಲ್ಲೇಶಪ್ಪ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ ಕುರಿತು.

ಗ್ರಾಅಪ/230/ಗ್ರಾಪಂಕಾ/2017

6) ಮೊದಲಿಗೆ ನಿಯಮಾನುಸಾರ ಆರೋಪಿತ ನೌಕರರಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೊಟೀಸನ್ನು ಜಾರಿ ಮಾಡುವ ಅವಶ್ಯಕತೆ ಇದ್ದು ಅದರಂತೆ ಕರಡು ಕಾರಣ ಕೇಳುವ ನೋಟಿಸನ್ನು ಪುಟ–19 ರಲ್ಲಿ ಅನುಮೋದನೆಗೆ ಮಂಡಿಸಿದೆ.

7) ಹಾಗೂ ವಿಚಾರಣಾ ವರದಿ ಮತ್ತು ದಾಖಲೆಗಳನ್ನು ಸ್ವೀಕರಿಸಿರುವ ಬಗ್ಗೆ ಲೋಕಾಯುಕ್ತ ಕಛೇರಿಗೆ ಸ್ವೀಕೃತಿ ಪತ್ರ ನೀಡಲು ಕರಡು ಪತ್ರವನ್ನು ಪುಟ – 20 ರಲ್ಲಿ ಅನುಮೋದನೆಗೆ ಮಂಡಿಸಿದೆ.

24/3/2017

8) ಪೀ.ಬಿ)

8) ಹಿಂದಿನ ಕಂಡಿಕೆ 1 ರಿಂದ 7 ನ್ನು ದಯವಿಟ್ಟು ಅವಗಾಹಿಸುವುದು ಶ್ರೀ. ಕಲ್ಲೇಶಪ್ಪ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರಿಗೆ 2ನೇ ಕಾರಣ ಕೇಳುವ ನೋಟೀಸು ಜಾರಿ ಮಾಡಲು ಪ್ರಧಾನ ಕಾರ್ಯದರ್ಶಿಯವರ ಅನುಮೋದನೆ ಪಡೆಯಬಹುದಾಗಿದೆ.

24/3

~~9)~~

10)

2 ನೇ ಕಾರಣ ಕೇಳುವ ನೋಟೀಸ್
ಜಾರಿಗೊಳಿಸಬಹುದಾಗಿದೆ.

31/3
ನಿರ್ದೇಶಕರು(ಪಂ.ರಾಜ್–I)

11) ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್)

2/4

12)

13)

ಗ್ರಾ.ಅ.ಪಂ.ರಾ. ಸಂಖ್ಯೆ: 751 ದಿನಾಂಕ: 01/4/17

ವಿಷಯ: ಶ್ರೀ. ಕಲ್ಲೇಶಪ್ಪ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯಿತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ ಕುರಿತು.

ಗ್ರಾಅಪ/230/ಗ್ರಾಪಂಕಾ/2017

~~ನಿರ್ದೇಶಕರು~~
~~(ಪಂ.ರಾಜ್ I)~~

14) [signature]
4/4

15) ಶುದ್ಧ ಪ್ರತಿಯನ್ನು ಸಹಿಗಾಗಿ ಮಂಡಿಸಿದೆ.
[signature] 6/4/2017

16) [signature]
6/4

17/4 [signature]

10/4 [signature]

[signature]
10/4/2017

19. ದಿನಾಂಕ:06-04-2017 ರಂದು ನೀಡಿರುವ ಕಾರಣ ಕೇಳುವ ನೋಟಿಸ್‌ಗೆ ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ರವರು ದಿನಾಂಕ:03-05-2017 (ದಿನಾಂಕ:04-05-2017) ರಂದು ಸಲ್ಲಿಸಿದ ವಿವರಣೆಯನ್ನು (ಪುಟ 26 ರಿಂದ 29) ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

20. ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರು ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಡೆಸಿದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:746:ಗ್ರಾಪಂಕಾ:2012, ದಿನಾಂಕ: 16-02-2013 ರಲ್ಲಿ ವಹಿಸಲಾಗಿತ್ತು.

21. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-1, ಕರ್ನಾಟಕ ಲೋಕಾಯುಕ್ತ ಇವರು ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

> "That you DGO Sri. H.N.Kalleshappa, Gram Panchayath Secretary,Alagawadi Gram Panchayath, Chitradurga demanded and accepted a bribe of Rs.5,000/- on 25-04-2011 from complainant Smt. Giddi Mehaboob W/o Hussain Peer of Venkateshwara Extension, Challakere Road, Chitradurg for giving licenses towards construction of a house,that is for doing an official act, and thereby you failed to maintain absolute integrity and devotion to duty and committed an act which is unbecoming of a Government Servant and thus you are guilty of misconduct under Rule 3(1)(i) to (iii) of KCS (Conduct) Rules 1966".

22. ವಿಚಾರಣಾಧಿಕಾರಿಯವರು, ದಿನಾಂಕ: 03-03-2017 ರಂದು ಮಾನ್ಯ ಉಪಲೋಕಾಯುಕ್ತರಿಗೆ ವಿಚಾರಣಾ ವರದಿ (ಪುಟ-12) ಯನ್ನು ಸಲ್ಲಿಸಿದ್ದು, ಸದರಿ ವರದಿಯ ಅನುಸಾರ ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ರವರ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ.

23. ಈ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 14(ಎ) (2) (ಡಿ) ಅನುಸಾರ ದಿನಾಂಕ:09-03-2017 ರಂದು ಮಾಡಿರುವ ಶಿಫಾರಸ್ಸಿನಲ್ಲಿ (ಪುಟ-16) ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(viii) ರ ಅನ್ವಯ ಅವರಿಗೆ "ಸೇವೆಯಿಂದ ವಜಾಗೊಳಿಸುವ" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

24. ಮೊದಲಿಗೆ ನಿಯಮಾನುಸಾರ ಆರೋಪಿತ ನೌಕರರಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟಿಸನ್ನು ದಿ: 06-04-2017 ರಂದು ನೀಡಲಾಗಿರುತ್ತದೆ.

ವಿಷಯ:- ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ ಕುರಿತು.

**ಗ್ರಾಅಪ/230/ಗ್ರಾಪಂಕಾ/2017**

25. ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ರವರು ಈ ಕೆಳಕಂಡಂತೆ ಕಾರಣ ಕೇಳಿ ನೋಟಿಸ್‌ಗೆ ಉತ್ತರ ನೀಡಿರುತ್ತಾರೆ.

- ಅನಾರೋಗ್ಯದಿಂದ ಬಳಲುತ್ತಿರುವ ಕಾರಣ 15 ದಿನ ವಿಳಂಬವಾಗಿ ವಿವರಣೆಯನ್ನು ಸಲ್ಲಿಸುತ್ತಿರುತ್ತೇನೆ ಎಂದು ತಿಳಿಸಿರುತ್ತಾರೆ.
- ರೂ.5,000/-ಗಳ ಅಕ್ರಮ ಸಂಭಾವನೆಯನ್ನು ಪಡೆದಿರುವ ಸಂಬಂಧ ಮಾನ್ಯ ಉಪಲೋಕಾಯುಕ್ತ ತನಿಖಾಧಿಕಾರಿಗಳು ನಡೆಸಿರುವ ವಿಚಾರಣೆಯಲ್ಲಿ ಸಾಕ್ಷ್ಯಾಧಾರಗಳಿಂದ ಯಾವುದೇ ಆರೋಪ ಸಾಬೀತಾಗಿರುವುದಿಲ್ಲ.
- ಈ ಮಧ್ಯೆ ತನಿಖೆಯನ್ನು 6ನೇ ತನಿಖಾಧಿಕಾರಿಯಿಂದ 1ನೇ ತನಿಖಾಧಿಕಾರಿಗೆ ವಹಿಸಲಾಗಿರುತ್ತದೆ. ಈ ಬಗ್ಗೆ ಆರೋಪಿತ ನೌಕರರಿಗೆ ಯಾವುದೇ ತಿಳುವಳಿಕೆಯನ್ನು ನೀಡಿರುವುದಿಲ್ಲ ಹಾಗೂ ಈ ಸಂಬಂಧ ಆರೋಪಿತ ನೌಕರರು ಸಲ್ಲಿಸಿದ್ದ ವಿವರಣೆಯನ್ನು ಸಹ ಪರಿಗಣಿಸದೇ ತನಿಖಾ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಸಲ್ಲಿಸಿರುತ್ತಾರೆ.
- ತನಿಖಾಧಿಕಾರಿಯ ತನಿಖೆಯ ಅಂಶಗಳನ್ನಾಧರಿಸಿ ಮಾನ್ಯ ಉಪಲೋಕಾಯುಕ್ತರು ಆರೋಪಿತ ನೌಕರರನ್ನು ಸೇವೆಯಿಂದ ವಜಾಗೊಳಿಸುವ ಶಿಫಾರಸ್ಸನ್ನು ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಇದು ಏಕಪಕ್ಷೀಯ ನಿರ್ಧಾರವೆನಿಸುತ್ತದೆ. ತನಿಖಾಧಿಕಾರಿ ನೀಡಿದ ಪ್ರತಿಕೂಲ ವರದಿಯನ್ನಾಧರಿಸಿ ಶಿಕ್ಷೆಯನ್ನು ವಿಧಿಸುವುದು ನ್ಯಾಯಸಮ್ಮತವಲ್ಲ.
- ಆರೋಪಿತ ನೌಕರರು ತಾವು ತಮ್ಮ ಸೇವಾವಧಿಯಲ್ಲಿ ಯಾವುದೇ ಕಳಂಕಕ್ಕೆ ಗುರಿಯಾಗಿರುವುದಿಲ್ಲವೆಂದು ವಿವರಿಸಿರುತ್ತಾರೆ. ಉಪಲೋಕಾಯುಕ್ತರ ವರದಿಯನ್ನು ನಿಯಮಾವಳಿಗನುಸಾರ ಪರಿಶೀಲಿಸದೇ "ಸೇವೆಯಿಂದ ವಜಾಗೊಳಿಸುವ ಶಿಸ್ತು ಕ್ರಮವನ್ನು ಜರುಗಿಸುತ್ತಿರುವುದು" ಸರ್ಕಾರದ ಪೂರ್ವ ನಿರ್ಧರಿತ ನಿರ್ಣಯವಾಗಿರುತ್ತದೆ. ಆದುದರಿಂದ ನನ್ನ ಮೇಲಿನ ಆರೋಪವನ್ನು ಸ್ಪಷ್ಟ ಸಾಕ್ಷ್ಯಾಧಾರಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಮಾನ್ಯಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವ ದಂಡನೆಯನ್ನು ವಿಧಿಸುವ ಬಗ್ಗೆ ಪುನರ್‌ಪರಿಶೀಲಿಸಬೇಕೆಂದು ಆರೋಪಿತ ನೌಕರರು ವಿನಂತಿಸಿಕೊಂಡಿರುತ್ತಾರೆ.

26. ಆಪಾದಿತ ನೌಕರರು ಎರಡನೇ ಕಾರಣ ಕೇಳುವ ನೋಟಿಸ್‌ನಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧಪಟ್ಟಂತೆ ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿದೆ. ಆರೋಪಿತ ನೌಕರರು ನೀಡಿರುವ ಮನವಿಯಲ್ಲಿರುವ ವಿವರಣೆಯನ್ನು ಪರಿಶೀಲಿಸಲಾಗಿದೆ. ಈ ವಿವರಣೆಯನ್ನು ಸ್ಥಾಪಿತ ನಿಯಮಾವಳಿಗಳ ಪ್ರಕಾರ ಒಪ್ಪಲು ಸಾಧ್ಯವಿರುವುದಿಲ್ಲ.

27. ಆದಾಗ್ಯೂ, ಈ ಹಿನ್ನೆಲೆಯನ್ನು ಒಪ್ಪಿದ್ದಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(viii) ರ ಅನ್ವಯ ಅವರಿಗೆ "ಸೇವೆಯಿಂದ ವಜಾಗೊಳಿಸುವ" ದಂಡನೆ ವಿಧಿಸಲು ಆದೇಶಿಸಬಹುದಾಗಿದೆ. ಇದಕ್ಕೆ ಮಾನ್ಯ ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಅನುಮೋದನೆ ಪಡೆಯಲು ಸಲ್ಲಿಸಿದೆ.

23/05/17.

ವಿಷಯ:- ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ ಕುರಿತು.

ಗ್ರಾಅಪ/230/ಗ್ರಾಪಂಕಾ/2017

೨೮.

ಕಂಡಿಕೆ(19) ರಿಂದ (26) ರಲ್ಲಿ ಪ್ರಸ್ತಾವ ವಿವರಗಳು ಇದ್ದು, ಕಂಡಿಕೆ (27) ರಂತೆ ಕ್ರಮ ವಹಿಸಬಹುದಾಗಿದೆ.

ಕಂಡಿಕೆ (27 [redacted]) ರಂತೆ ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರ ಅನುಮೋದನೆ ಪಡೆಯಬಹುದಾಗಿದೆ.

ನಿರ್ದೇಶಕರು (ಪಂ.ರಾಜ್-1)

31) ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್)

ಡಾ: ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ವಿಷಯ:- ಶ್ರೀ ಕಲ್ಲೇಶಪ್ಪ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಅಲಗವಾಡಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ ಕುರಿತು.

ಗ್ರಾಅಪ/230/ಗ್ರಾಪಂಕಾ/2017

ಸ್ವೀಕರಿಸಿದ (ಪ್ರಧಾನ ಕಾರ್ಯದರ್ಶಿಗಳು)
(ಗ್ರಾ.ಅಪ)